ದಿನಾಂಕ 18.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ ಐ.ಆರ.ಪಿ ವಕೀಲರಿಂದಃ-**

ನಾನು ವಾದ ಪತ್ರವನ್ನು ಓದಿರುತ್ತೇನೆ. ವಾದಿಗೆ ದಾವಾಸ್ವತ್ತು ಯಾವ ರೀತಿ ಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ವಾದಿಯು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಹಾಜರುಪಡಿಸಿರುವ ದಾಖಲೆಗಳನ್ನು ನಾನು ನೋಡಿರುವುದ್ಲಿಲ. ಬೆಳ್ಳಿಯಪ್ಪ ರವರು ನನಗೆ ಆತ್ಮೀಯರಾಗಿದ್ದು, ಅವರು ವಾದಿಯ ಸಹೋದರ. ಅವರಿಗೆ ಕೆ ಬಾಡಗ ಗ್ರಾಮದಲ್ಲಿ ಆಸ್ತಿಗಳು ಇವೆ. ಬೆಳ್ಳಿಯಪ್ಪರವರಿಗೆ ಯಾವ ಸರ್ವೆ ನಂಬರ ಗಳಲ್ಲಿ ಎಷ್ಟು ಜಮೀನು ಹಾಗೂ ಯಾವ ರೀತಿ ಅವರಿಗೆ ಬಂತು ಎಂಬುದು ನನಗೆ ಗೊತ್ತಿಲ್ಲ. ಬಾಡಗ ಗ್ರಾಮದಲ್ಲಿ ಕುಟ್ಟದಿಂದ ಹುಣಸೂರಿಗೆ ಹೋಗುವ ರಸ್ತೆಯ ಎರಡೂ ಬದಿಗಳಲ್ಲಿ ಬೆಳ್ಳಿಯಪ್ಪ ರವರಿಗೆ ಸೇರಿದ ಆಸ್ತಿಗಳು ಇವೆ. ಬೆಳ್ಳಿಯಪ್ಪ ರವರಿಗೆ ಸೇರಿದ ಆಸ್ತಿಗಳು ರಸ್ತೆಯ ಬಲ ಬದಿಗೆ ಮಾತ್ರ ಇದೆ ಎಂದರೆ ಸರಿಯಲ್ಲ. ವಾದಿ ಮತ್ತು ಬೆಳ್ಳಿಯಪ್ಪ ರವರ ಆಸ್ತಿಗಳು ಪರಸ್ಪರ ಹೊಂದಿಕೊಂಡಂತೆ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಂಗಪ್ಪ ರವರು 1995 ರಿಂದ 2000 ರ ಇಸವಿಯ ಮಧ್ಯದಲ್ಲಿ ಮೃತರಾಗಿರುತ್ತಾರೆ. ಚಂಗಪ್ಪ ರವರು ಮೃತರಾದ ಬಳಿಕ ಅವರಿಗೆ ಸೇರಿದ ಆಸ್ತಿಗಳನ್ನು ಅವರ ಪತ್ನಿ ಬನ್ನಿ ಪೂವಮ್ಮ ರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಚಂಗಪ್ಪ ರವರ ಪತ್ನಿಯು ತನ್ನ ಮಗ ಮತ್ತು ಸೊಸೆಯೊಂದಿಗೆ ಯಾವ ವರ್ಷ

ಜೊತೆಯಾಗಿ ವಾಸವಾಗಿದ್ದರು ಎಂಬುದು ನನಗೆ ಗೊತ್ತಿಲ್ಲ. ಬೆಳ್ಳಿಯಪ್ಪರವರು ಮೃತರಾದ ದಿನಾಂಕ ಮತ್ತು ಇಸವಿ ನನಗೆ ಗೊತ್ತಿಲ್ಲ. ಬೆಳ್ಳಿಯಪ್ಪ ರವರು ಮೃತರಾದಾಗ ಅವರ ತಾಯಿ ಬನ್ನಿ ಪೂವಮ್ಮ ರವರು ಜೀವಂತವಾಗಿ ಇದ್ದರು. ಬನ್ನಿ ಪೂವಮ್ಮ ರವರು ಯಾವಾಗ ಮತ್ತು ಎಲ್ಲಿ ಮೃತರಾದರು ಎಂಬುದು ನನಗೆ ಗೊತ್ತಿಲ್ಲ. ಬನ್ನಿ ಪೂವಮ್ಮ ರವರು ಅನಾರೋಗ್ಯದಿಂದ ಮೃತರಾದ ಬಗ್ಗೆ ನನಗೆ ಗೊತ್ತಿಲ್ಲ. ಅವರು ಮೃತರಾದ ಸಂದರ್ಭದಲ್ಲಿ ಯಾರು ಅವರನ್ನು ನೋಡಿಕೊಳ್ಳುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಬನ್ನಿ ಪೂವಮ್ಮ ರವರನ್ನು ವಾದಿಯು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಿ.ಡಿ 5 ರಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ಸಿ ಆರ ಸಿ ಪ್ರಮಾಣಪತ್ರ ನನ್ನ ಹೆಸರಿನಲ್ಲಿ ಇನ್ನೂ ಆಗಿರುವುದಿಲ್ಲ. ನಿ.ಡಿ 5 ರಲ್ಲಿ ನಮಾುದಿಸಿರುವ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಿ ಆರ ಸಿ ಪ್ರಮಾಣಪತ್ರ ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ ಆದರೆ ತಾಯಿಯ ಹೆಸರನಲ್ಲಿ ಇತ್ತು. 1953 ನೇ ಇಸವಿಯಲ್ಲಿ ಸಿ ಆರ ಸಿ ಪ್ರಮಾಣಪತ್ರ ನನ್ನ ತಾಯಿಯ ಹೆಸರಿನಲ್ಲ್ ಇತ್ತು. ನನ್ನ ತಾಯಿಯ ಹೆಸರಿಗೆ ಸಿ ಆರ ಸಿ ಮಾಡುವ ಸಂದರ್ಭದಲ್ಲಿ ಸರ್ವೆ ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿ.ಡಿ 5 ರಲ್ಲಿ ನಮೂದಿಸಿರುವ ಎರಡೂ ಸ್ವತ್ತುಗಳಿಗೂ ಸರ್ವೆ ಸ್ಕೆಚ್ ಇದೆ. ಸದರಿ ಸ್ವತ್ತುಗಳನ್ನು ಹೊರತುಪಡಿಸಿ ನನಗೆ ಬೇರೆ ಆಸ್ತಿಗಳು ಇರುವುದಿಲ್ಲ. ಸದರಿ ಎರಡೂ ಸ್ವತ್ತುಗಳು ಒಂದೇ ಬೇಲಿಯಲ್ಲಿ ಇದ್ದು, 50-60 ವರ್ಷದ ಕಾಫಿ ಗಿಡಗಳು ಇವೆ . ಸರ್ವೆ ನಂ. 400/27 ಮತ್ತು 400/28 ರ ಆಸ್ತಿಗಳ ಪೂರ್ವ ಬೆಳ್ಳಿಯಪ್ಪರವರಿಗೆ

ಸೇರಿದ ಜಮೀನು ಇದ್ದು, ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಉಸ್ತುವಾರಿಯನ್ನು ಬೆಳ್ಳಿಯಪ್ಪರವರು ಮೃತರಾಗುವವರೆಗೆ ಅವರೇ ನೋಡಿಕೊಳ್ಳುತ್ತಿದ್ದರು. ಅವರುಮೃತರಾದ ಬಳಿಕ ಸದರಿ ಸ್ವತ್ತಿನ ಉಸ್ತುವಾರಿಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಬೆಳಿಯಪ್ಪರವರು ಮೃತರಾಗಿ ಅಂದಾಜು 10-15 ವರ್ಷಗಳಾಗಿವೆ. ಬೆಳಿಯಪ್ಪರವರಿಗೆ ಆರತಿ ಎಂಬ ಪತ್ನಿ ಇದ್ದು, ಮಕ್ಕಳು ಇರುವುದಿಲ್ಲ. ಆರತಿಯವರು ಎಲ್ಲಿ ವಾಸವಾಗಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಬೆಳಿಯಪ್ಪರವರ ಆಸ್ತಿಗಳನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಆಸ್ತಿಯ ಒಂದು ದಿಕ್ಕಿಗೆ ಮಾತ್ರ ಬೆಳಿಯಪ್ಪರವರ ಆಸ್ತಿ ಇದೆ.

ಬೆಳಿಯಪ್ಪ ರವರು ಆದಿವಾಸಿಗಳಿಗೆ ಆಸ್ತಿಯನ್ನು ಯಾವ ವರ್ಷ ಬಿಟ್ಟುಕೊಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಆಸ್ತಿಯನ್ನು ಬಿಟ್ಟುಕೊಟ್ಟ ಬಗ್ಗೆ ದಾಖಲೆಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಆ ಬಗ್ಗೆ ಪಂಚಾಯಿತಿ ದಾಖಲೆಗಳಲ್ಲಿ ನಮೂದಾಗಿರುವ ಬಗ್ಗೆಯೂ ಸಹಾ ನನಗೆ ಗೊತ್ತಿಲ್ಲ. ಸ್ಮಶಾನವೆಂದು ಹೇಳಲಾದ ಜಾಗ ಆರ್.ಟಿ.ಸಿಯಲ್ಲಿ ನಮೂದು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸ್ಮಶಾನ ನನ್ನ ತೋಟದ ಪಕ್ಕ ಇದೆ. ಬೆಳಿಯಪ್ಪ ರವರು ಮೃತರಾದ ಬಳಿಕ ಸದರಿ ಸ್ಮಶಾನವನ್ನು ಉಪಯೋಗಿಸುತ್ತಿಲ್ಲ.

ವಾದಿಯು ನಿ.ಪಿ 5 ರಂತೆ ನನಗೆ ವಕೀಲರ ಮೂಲಕ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಎಂ.ಟಿ

ಕಾರ್ಯಪ್ಪರವರ ಮೂಲಕ ನಿ.ಪಿ 5 ರ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ಪ್ರತ್ಯುತ್ತರ ನೋಟೀಸನ್ನು ನೀಡುವ ಸಂದರ್ಭದಲ್ಲಿ ಸ್ಮಶಾನದ ವಿಚಾರವನ್ನು ನಾನು ನನ್ನ ವಕೀಲರಿಗೆ ತಿಳಿಸಿದ್ದೆನು. ಆ ವಿಚಾರವನ್ನು ನನ್ನ ವಕೀಲರು ನಿ.ಪಿ 7 ರಲ್ಲಿ ನಮೂದಿಸಿರುತ್ತಾರೆ. ವಾದಿಯು ನಾನು ಅವರಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿರುವುದಾಗಿ ನಿ.ಪಿ 5 ರಲ್ಲಿ ತಿಳಿಸಿದ್ದರು ಎಂದರೆ ಸರಿ. ಸದರಿ ನಿ.ಪಿ 5 ದಾಖಲೆಯಲ್ಲಿ ಜಂಟಿ ಸರ್ವೆ ಮಾಡಿಸುವ ಬಗ್ಗೆ ವಾದಿಯು ನಮೂದಿಸಿದ್ದ ವಿಚಾರ ನನಗೆ ಗೊತ್ತಿಲ್ಲ. ನನಗೆ ನಿ.ಪಿ 9 ರಂತೆ ಭೂ ಮಾಪಕರು ನೋಟೀಸನ್ನು  ನೀಡಿದ್ದರು ಎಂದರೆ ಸರಿ. ಸದರಿ ನೋಟೀಸಿನ ಪ್ರಕಾರ ಅಳತೆ ಕಾರ್ಯ ಮಾಡಲಾಗಿತ್ತು. ಆ ಸಂದರ್ಭದಲ್ಲಿ ನಾನು ಸಹಾ ಹಾಜರಿದ್ದು, ಮಹಜರ್ ಗೆ ಸಹಿ ಮಾಡಿರುತ್ತೇನೆ. ವಾದಿಯು ಆ ಸಂದರ್ಭದಲ್ಲಿ ಹಾಜರಿರಲಿಲ್ಲ ಆದರೆ ಅವರ ಮಗ ಹಾಜರಿದ್ದರು. ಅಳತೆಯ ಸಂದರ್ಭದಲ್ಲಿ ಎಂ.ಎನ್ ಜಯಪ್ರಕಾಶ್ ರವರು ಹಾಜರಿದ್ದರು ಎಂದರೆ ಸರಿಯಲ್ಲ. ಭೂ ಮಾಪಕರು ನಿ.ಪಿ 11 ರಂತೆ ಸ್ಕೆಚ್ ಅನ್ನು ಮತ್ತು ವರದಿಯನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ವರದಿಯಲ್ಲಿ ಏನು  ನಮೂದಿಸಲಾಗಿದೆ ಎಂಬುದು ನನಗೆ ಗೊತ್ತಿಲ್ಲ. ಸದರಿ  ವರದಿಯಲ್ಲಿ ನಾನು ಈ ದಾವೆಯ ಬಿ ಅನುಸೂಚಿ ಸ್ವತ್ತನ್ನು ಒತ್ತುವರಿ ಮಾಡಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ನಾನು ನನ್ನ ತಂದೆ ಮತ್ತು ತಾಯಿಯ ಮೃತದೇಹಗಳನ್ನು ಸರ್ವೆ ನಂಬರ್ 400/17 ರ  ಆಸ್ತಿಯ ಒಳಗಡೆ ಸುಟ್ಟಿರುತ್ತೇನೆ. ಸದರಿ ವಿಚಾರವನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ.  ನನ್ನ ತಂದೆಯು 1993 ನೇ ಇಸವಿಯಲ್ಲಿ

ಮೃತರಾಗಿರುತ್ತಾರೆ. ಆಗ ಚಂಗಪ್ಪರವರು ಜೀವಂತವಾಗಿ ಇದ್ದರು. ನನ್ನ ತಾಯಿಯು ದಿನಾಂಕ 03.11.2016 ರಂದು ಮೃತರಾಗಿರುತ್ತಾರೆ. ಈ ದಾವೆಯಲ್ಲಿ ನ್ಯಾಯಾಲಯದ ನಿಯೋಗಿಯು ದಾವಾ ಸ್ವತ್ತನ್ನು ಅಳತೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಅವರು ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. ಕಮಿಷನರ ರವರು ನಾನು ದಾವಾ ಬಿ ಅನುಸೂಚಿ ಸ್ವತ್ತನ್ನು ಒತ್ತುವರಿ ಮಾಡಿರುವುದಾಗಿ ನನ್ನ ವರದಿಯಲ್ಲಿ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೋರ್ಟ್ ಕಮಿಷನರ ರವರು ನ್ಯಾಯಾಲಯಕ್ಕೆ ಸಲ್ಲಿಸಿದ ಅಂಚೆ ಸ್ವೀಕೃತಿ ಪತ್ರದಲ್ಲಿ ಇರುವ ಸಹಿಯು ನನ್ನದು ಅಲ್ಲ. ದಾವಾ ಬಿ ಅನುಸೂಚಿ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ. ದಾವಾ ಬಿ ಅನುಸೂಚಿ ಸ್ವತ್ತನ್ನು ವಾದಿಗೆ ಬಿಟ್ಟುಕೊಡಲು ನಿಮಗೆ ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಆ ಸ್ವತ್ತು ಅವರಿಗೆ ಬರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಬಿ ಅನುಸೂಚಿ ಸ್ವತ್ತನ್ನು ಒತ್ತುವರಿ ಮಾಡಿರುವುದರಿಂದ ಅದನ್ನು ವಾದಿಗೆ ಬಿಟ್ಟುಕೊಡಲು ಭಾದ್ಯನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

ಓಎಸ್. 2/2018
ಡಿಡಬ್ಲ್ಯೂ-1